ಓ ಎಸ್ ನಂಬರ 265/2025
ಪಿ.ಡಬ್ಲ್ಯೂ 1

**ದಿನಾಂಕ: 01.06.2026**
**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

ಮುಂದುವರೆದ ಮುಖ್ಯ ವಿಚಾರಣೆ: ವಾದಿ ಪರ ವಕೀಲರಿಂದ: ಇರುವುದಿಲ್ಲ.

**ವಾಟೀ ಸವಾಲು: ಪ್ರತಿವಾದಿ ಪರ ಎ ಜಿ ಪಿ ವಕೀಲರಿಂದ:**

ನಮ್ಮ ತಂದೆಗೆ ಒಟ್ಟು ನಾಲ್ಕು ಜನ ಮಕ್ಕಳು. ನಾನು ಮೊದಲನೆಯದವನು. ಆಧಾರ ಕಾರ್ಡನ್ನು ಯಾವ ವರ್ಷದಲ್ಲಿ ಮಾಡಿಸಿದೇನು ಎಂದು ನೆನಪಿಲ್ಲ. ನನ್ನ ಎಸ್ ಎಸ್ ಎಲ್ ಸಿ **2021** ರಲ್ಲಿ ಮುಗಿದಿರುತ್ತದೆ. ಅದಕ್ಕೆ ಸಂಬಧಿಸಿದ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಶಾಲಾ ದಾಖಲಾತಿಯ ಕಾಲಕ್ಕೆ ಜನನ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತಾರೆ. ಜನನ ಪ್ರಮಾಣ ಪತ್ರವನ್ನು ನನ್ನ ತಂದೆ ತಾಯಿ ಹೇಳಿದ ಪ್ರಕಾರ ದಾಖಲಿಸಿಕೊಂಡಿರುತ್ತಾರೆ. ಹೆಸರನ್ನು ದಾಖಲಿಸಿಕೊಳ್ಳಲು ತಹಶೀಲ್ದಾರ ರವರಿಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾವು ನೀಡಿದ ಆಧಾರದ ಮೇಲೆ ದಾಖಲಿಸಿಕೊಳ್ಳಲಾಗಿರುತ್ತದೆ ಎಂದರೆ ಸರಿ.

ಜನನ ಪ್ರಮಾಣ ಪತ್ರ ದಿನಾಂಕ **22.03.2004** ರಂದು ನೊಂದಣಿಯಾಗಿದ್ದು, ಅದನ್ನು **20** ವರ್ಷದ ಬಳಿಕ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ನಾವು ನೀಡಿದ ಮಾಹಿತಿಯ ಪ್ರಕಾರ ಜನನ ಪ್ರಮಾಣ ಪತ್ರ ನೊಂದಣಿಯಾಗಿದ್ದು, ಪ್ರತಿವಾದಿಯರ ಯಾವುದೇ ತಪ್ಪು ಇರುವುದಿಲ್ಲ ಎಂದರೆ ಸರಿ. ದಾವೆಯನ್ನು ಸಲ್ಲಿಸಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನನ್ನ ಜನನ ಪ್ರಮಾಣ ಪತ್ರದಲ್ಲಿ ಬದಲಾವಣೆ ಕೋರಿ ದಾವೆಯನ್ನು ಸಲ್ಲಿಸಿರುತ್ತೇನೆ. ದಾವೆಯಲ್ಲಿ ಬರೆದ ಯಾವುದೇ ಮಾಹಿತಿ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. **5-6** ವರ್ಷಗಳ ಹಿಂದೆಯೇ ಜನನ ಪ್ರಮಾಣ ಪತ್ರದಲ್ಲಿ ತಪ್ಪು ನಮೂದು ಆಗಿರುವುದು ಗಮನಕ್ಕೆ ಬಂದಿದ್ದರು ಸಹ ತಡವಾಗಿ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಯಾವುದೇ ತಪ್ಪು ಇರದೇ ಇದ್ದರೂ ಸಹ ಅವರ ವಿರುದ್ದ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.
( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಪ್ರ.ದಿ.ನ್ಯಾ . ಮತ್ತು ಪ್ರ.ದ.ನ್ಯಾ . ದಂ. ನ್ಯಾ . ಬೈಲಹೊಂಗಲ